# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಯೋಜನೆಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು 2016-17ನೇ ಸಾಲಿಗೆ ಮುಂದುವರೆಸುವ ಹಾಗೂ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಬಟವಾಡೆ ಅಧಿಕಾರಿಗಳಾಗಿ ಹಾಗೂ 08 ಪ್ರಾದೇಶಿಕ ಕಛೇರಿಗಳ ರಿಜಿಸ್ಟ್ರಾರ್ ಹುದ್ದೆಗಳ ಮುಂದುವರಿಕೆ ಪರವಾನಗಿ ನೀಡುವ ಬಗ್ಗೆ.

ಓದಲಾಗಿದೆ : (1) ಸರ್ಕಾರದ ಆದೇಶ ಸಂಖ್ಯೆ ಇಡಿ 62 ಹೆಚ್‌ಪಿಸಿ 2015, ದಿ:14-05-2015.
(2) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ ಕಾಶಿಇ 14 ಆಯವ್ಯಯ 2016-17 ದಿನಾಂಕ 29-06-2016.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು 2015-16ನೇ ಸಾಲಿಗೆ ಮುಂದುವರೆಸುವ ಹಾಗೂ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಬಟವಾಡೆ ಅಧಿಕಾರಿಗಳಾಗಿ ಮುಂದುವರಿಸಲು ಪರವಾನಗಿ ನೀಡಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರ ಪತ್ರದಲ್ಲಿ ಯೋಜನೆಯಡಿಯಲ್ಲಿ ಬರುವ ಒಟ್ಟು 247 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು 2016-17ನೇ ಸಾಲಿಗೆ ಮುಂದುವರೆಸಿ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಬಟವಾಡೆ ಅಧಿಕಾರಿಗಳಾಗಿ ಹಾಗೂ 08 ಪ್ರಾದೇಶಿಕ ಕಛೇರಿಗಳ ರಿಜಿಸ್ಟ್ರಾರ್ ಹುದ್ದೆಗಳ ಮುಂದುವರಿಕೆ ಪರವಾನಗಿ ನೀಡುವಂತೆ ಕೋರಿರುತ್ತಾರೆ
ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ ಇಡಿ 42 ಹೆಚ್‌ಪಿಸಿ 2016 ಬೆಂಗಳೂರು, ದಿನಾಂಕ: 27-08-2016

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಯೋಜನೆಯಡಿಯಲ್ಲಿ ಬರುವ ಒಟ್ಟು 247 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಹಾಗೂ 8 ರಿಜಿಸ್ಟ್ರಾರ್ ಹುದ್ದೆಗಳನ್ನು 2016-17ನೇ ಸಾಲಿಗೆ ಮುಂದುವರೆಸಲು ಕಾಲೇಜು ಶಿಕ್ಷಣ ಆಯುಕ್ತರಿಗೆ ಅನುಮೋದನೆ ನೀಡಲಾಗಿದೆ. ಹಾಗೂ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಬಟವಾಡೆ ಅಧಿಕಾರಿಗಳಾಗಿ ಮುಂದುವರಿಕೆ ಪರವಾನಗಿಯನ್ನು ಪ್ರಾಂಶುಪಾಲರುಗಳಿಗೆ ಡ್ರಾಯಿಂಗ್ ಕೋಡ್ ನೀಡಿ ಅಧಿಕಾರ ಪತ್ರದ ಜೊತೆ ಖಜಾನೆಗೆ ಸೂಚಿಸಲು ಮಹಾಲೇಖಪಾಲರನ್ನು ಕೋರುವಂತೆ ತಿಳಿಸಲಾಗಿದೆ.

ಈ ಆದೇಶವನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 3 ಟಿಎಫ್‌ಪಿ 2016 ದಿನಾಂಕ: 02-4-2016 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

27/8

[ಅಪರ್ಣಾ ಪಾವಟೆ]
ಸರ್ಕಾರದ ಉಪ ಕಾರ್ಯದರ್ಶಿ
ಶಿಕ್ಷಣ ಇಲಾಖೆ[ಯೋಜನೆ]

ಇವರಿಗೆ :

1. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು
2. ಮಹಾಲೇಖಪಾಲರು, ಕರ್ನಾಟಕ(ಆಡಿಟ್ 1 ಮತ್ತು 2 ), ಬೆಂಗಳೂರು.
3. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.

4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
6. ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಆಯುಕ್ತ'ರ ಮೂಲಕ)
7. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಸಂಬಂಧಪಟ್ಟ ಜಿಲ್ಲೆಗಳ ಖಜಾನಾಧಿಕಾರಿಗಳು(ಆಯುಕ್ತ'ರ ಮೂಲಕ)
9. ಸರ್ಕಾರದ ಉಪ ಕಾರ್ಯದರ್ಶಿ, (ಕಾಲೇಜು ಶಿಕ್ಷಣ) ಶಿಕ್ಷಣ ಇಲಾಖೆ
10. ಸರ್ಕಾರದ ಅಧೀನ ಕಾರ್ಯದರ್ಶಿ, (ಕಾಲೇಜು ಶಿಕ್ಷಣ) ಶಿಕ್ಷಣ ಇಲಾಖೆ
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ ಅವರ ಆಪ್ತ ಕಾರ್ಯದರ್ಶಿಗಳು.
12. ಹೆಚ್ಚುವರಿ ಪ್ರತಿಗಳು.

<u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಕಾಶಿಇ:14:ಸಿ.ಹು.ಮು:ಆಯವ್ಯಯ:2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು,ದಿನಾಂಕ:27-08-2016

ಮೇಲಿನ ಸರ್ಕಾರದ ಆದೇಶವನ್ನು ಕೆಳಕಂಡವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ ಹಾಗೂ ಸದರಿ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಖಜಾನೆಗೆ ತಪ್ಪದೇ ಸಲ್ಲಿಸಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರಭಾರ)

ಇವರಿಗೆ:

1) ಯೋಜನೆಯಡಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ಯೋಜನಾ ಅಧೀಕ್ಷಕರ ಹುದ್ದೆಗಳಿರುವ ಯೋಜನೇತರ ಕಾಲೇಜುಗಳ ಪ್ರಾಂಶಪಾಲರುಗಳಿಗೆ ಮತ್ತು ಯೋಜನೆಯಡಿಯಲ್ಲಿ ಮಂಜೂರಾದ 06 ರಿಜಿಸ್ಟ್ರಾರ್ ಹುದ್ದೆಗಳಿರುವ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇವರಿಗೆ ಸದರಿ ಆದೇಶವನ್ನು ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು.
3) ಕಛೇರಿ ಪ್ರತಿ.